**ಬಳ್ಳಾರಿ ಕೋಟೆಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಮಾನತ್ತು ಮಾಡಿದ ಶಿಕ್ಷಕರಿಗೆ ಭಡ್ತಿ.**

775 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬಳ್ಳಾರಿ ಕೋಟೆಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಹಾಗೂ ಸಹ ಶಿಕ್ಷಕರು, ಲೋಕಾಯುಕ್ತ ಧಾಳಿಯಲ್ಲಿ ಸಿಕ್ಕಿ ಬಿದ್ದಿದ್ದರಿಂದ ಬಂಧಿಸಿದ್ದು ನಿಜವೇ?*

*ಆ) ಹಾಗಿದ್ದಲ್ಲಿ ಇವರನ್ನು ಸರ್ಕಾರ ಅಮಾನತ್ತು ಮಾಡಿದೆಯೇ?*

*ಇ) ಅಮಾನತ್ತು ಮಾಡಿದ ಶಿಕ್ಷಕನಿಗೆ ಬಡ್ತಿ ನೀಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?*

*ಈ) ಹಾಗಿದ್ದಲ್ಲಿ ಈ ಶಿಕ್ಷಕನಿಗೆ ಬಡ್ತಿ ನೀಡಿದ ಅಧಿಕಾರಿ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?*

ಶ್ರೀ ಹೆಚ್. ಜಿ. ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಹೌದು.

ಇ) ಹೌದು.

ಈ) ಶ್ರೀಮತಿ ಡಿ. ವೆಂಕಟಲಕ್ಷ್ಮಿ ಮುಖ್ಯ ಶಿಕ್ಷಕರು ಹಾಗೂ ಶ್ರೀ ಎ.ಎಂ. ಸಿದ್ದಲಿಂಗಸ್ವಾಮಿ ಸಹ ಶಿಕ್ಷಕರು ಇವರನ್ನು ಲಂಚ ಪಡೆದ ಆಪಾದನೆಗಾಗಿ ಲೋಕಾಯುಕ್ತ ದಾಳಿಯಲ್ಲಿ ಸಿಕ್ಕಿ ಬಿದ್ದಿದ್ದಿಂದ, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ ಜಿಲ್ಲೆ ಇವರು ಅಮಾನತ್ತು ಮಾಡಿ ಆದೇಶ ಹೊರಡಿಸಿದ್ದರು. ಈ ಆದೇಶ ಸಹನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಇವರ ಗಮನಕ್ಕೆ ಬಾರದ ಕಾರಣ ಪ್ರಚಲಿತ ಜಾರಿಯಲ್ಲಿರುವ ಸರ್ಕಾರದ ಆದೇಶದ ಅನುಗುಣವಾಗಿ ದಿ:1-1-96ರಲ್ಲಿದ್ದಂತೆ ತರಬೇತಿ ಹೊಂದಿದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಬಳ್ಳಾರಿ ಕೋಟೆಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಹ ಶಿಕ್ಷಕರಾದ ಶ್ರೀ ಎ.ಎಂ. ಸಿದ್ದಲಿಂಗಸ್ವಾಮಿಯವರಿಗೆ ಪ್ರೌಢಶಾಲಾ ಸಹ ಶಿಕ್ಷಕರ ಅಮಾನತ್ತಿನ ಆದೇಶ ಜಾರಿಯಲ್ಲಿ ಕರ್ತವ್ಯ ಲೋಪ ದೋಷಕ್ಕೆ ಕಾರಣರಾದ ನೌಕರರ ಮೇಲೆ ವಿಚಾರಣೆ ಕಾಯ್ದಿರಿಸಿ ಅಮಾನತ್ತಿನಲ್ಲಿಡಲಾಗಿದೆ. ಅಲ್ಲದೆ ಶಿಕ್ಷಕರಿಗೆ ಬಡ್ತಿ ನೀಡಿದ್ದ ಆದೇಶವನ್ನು ದಿನಾಂಕ:1-3-97ರಂದು ವಾಪಸ ಪಡೆದು, ಸದರಿ ಶಿಕ್ಷಕರನ್ನು ಪುನಃ ಅಮಾನತ್ತಿನಲ್ಲಿಡಲಾಗಿದೆ. ಹಾಗೂ ಈ ರೀತಿಯ ಲೋಪಕ್ಕೆ ಎಡೆ ಕೊಡದೆ ಇರಲು ಸಂಬಂಧಪಟ್ಟ ಅಧಿಕಾರಿಗೆ ಸೂಚಿಸಲಾಗಿದೆ.